ಅ) 1997-98ನೇ ಸಾಲಿನ ಅಂತ್ಯದ ವರೆಗೆ 3 ಕಾಮಗಾರಿಗಳನ್ನು ಮುಗಿಸಲಾಗಿದೆ.

ಇ) ಡಾಂಬರ್ ಪೂರೈಕೆಯಲ್ಲಿನ ವಿಳಂಬ, ಅರಣ್ಯ ಇಲಾಖೆಯವರು ಹೆಚ್ಚಿನ ರಾಜಧನ ವಸೂಲಿಯ ಒತ್ತಡದಿಂದಾದ ಜಲ್ಲಿ ಸಂಗ್ರಹಣೆಯಲ್ಲಿ ವಿಳಂಬ, ಸ್ಥಳಾತಿಕ್ರಮಣ ಹಾಗೂ ಗುತ್ತೇದಾರರು ನಿಧಾನ ಪ್ರಗತಿ ತೋರಿಸಿದ್ದರಿಂದ ಕೆಲ ಕಾಮಗಾರಿಗಳು ಅಪೂರ್ಣವಾಗಿದೆ. 1998-99ನೇ ಸಾಲಿನಲ್ಲಿ ಉಳಿದ 245 ಕಾಮಗಾರಿಗಳನ್ನು ಸಂಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಮೂರು ವರ್ಷಗಳಲ್ಲಿ 212 ಮತಕ್ಷೇತ್ರಗಳಿಗೆ ಬಿಡುಗಡೆಯಾದ ಒಟ್ಟು ಹಣ (ಅನುದಾನ) 918.00 ಲಕ್ಷ ರೂ.ಗಳು.

ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಸಂಗ್ರಹ

850 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1994-95, 95-96, 96-97ನೇ ಸಾಲುಗಳಲ್ಲಿ ಯಾವ ಯಾವ ಅಧಿನಿಯಮದಲ್ಲಿ ಎಷ್ಟೆಷ್ಟು ವಾಣಿಜ್ಯ ತೆರಿಗೆ ಸಂಗ್ರಹವಾಗಿದೆ? ಪೂರ್ಣ ವಿವರ ನೀಡುವುದು? ಈ ವರ್ಷದಲ್ಲಿ ತೆರಿಗೆ ಸಂಗ್ರಹದಲ್ಲಿ ಆಗಿರತಕ್ಕ ಏರುಪೇರುಗಳಿಗೆ ಕಾರಣವೇನು?

ಆ) 1997-98ನೇ ಸಾಲಿನಲ್ಲಿ ಜನವರಿ 31, 1998ರವರೆಗೆ ಎಷ್ಟು ತೆರಿಗೆ ಸಂಗ್ರಹಿಸಲಾಗಿದೆ. ಮಾರ್ಚ್ 31, 98ರವರೆಗೆ ಎಷ್ಟು ತೆರಿಗೆ ಸಂಗ್ರಹಕ್ಕೆ ಗುರಿ ನಿಗಧಿಪಡಿಸಲಾಗಿದೆ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ)

(ರೂ. ಕೋಟಿಗಳಲ್ಲಿ)

ಕ್ರ. ಸಂ.	ಅಧಿನಿಯಮ	1994-95	1995-96	1996-97
1.	ಮಾರಾಟ ತೆರಿಗೆ	2505.76	2954.45	3510.19
2.	ಮನರಂಜನಾ ತೆರಿಗೆ	47.05	45.05	34.20
3.	ಕೃಷಿ ವರಮಾನ ತೆರಿಗೆ	16.82	49.78	39.53
4.	ವೃತ್ತಿ ತೆರಿಗೆ	92.40	105.76	119.42
5.	ಪ್ರವೇಶ ತೆರಿಗೆ	117.00	168.34	199.44
6.	ವೈಭವ ತೆರಿಗೆ	16.43	20.80	31.21
7.	ಜೂಜು ತೆರಿಗೆ	14.05	13.46	11.81
	ಒಟ್ಟು	2809.51	3357.65	3945.80

ತೆರಿಗೆ ಸಂಗ್ರಹಣೆಯಲ್ಲಿ ಆಗಿರತಕ್ಕ ಏರುಪೇರುಗಳಿಗೆ ಕಾರಣಗಳು ಈ ಕೆಳಗಿನಂತಿವೆ :

ಅ) ತೆರಿಗೆ ಸುಧಾರಣಾ ಕ್ರಮವಾಗಿ ಸರ್‌ಚಾರ್ಜ್‌ನ್ನು ರದ್ದು ಮಾಡಿರುವುದು.

ಆ) ಅನೇಕ ಸರಕುಗಳಿಗೆ ತೆರಿಗೆ ವಿನಾಯಿತಿ ನೀಡಿರುವುದು.

ಇ) ಹೊಸ ಕೈಗಾರಿಕೆಗಳಿಗೆ ತೆರಿಗೆ ಮುಂದೂಡಿಕೆ ಸೌಲಭ್ಯ ನೀಡಿರುವುದು.

ಈ) ಮಾರುಕಟ್ಟೆಯಲ್ಲಿ ವಹಿವಾಟು ಕಡಿಮೆಯಾಗಿರುವುದು.

ಅ) (ರೂ.ಕೋಟಿಗಳಲ್ಲಿ)

ಕ್ರ. ಸಂ.	ಅಧಿನಿಯಮ	1997-98ರ ವಾರ್ಷಿಕ ಗುರಿ	31.1.98ರ ವರೆಗಿನ ಸಂಗ್ರಹಣೆ
1.	ಮಾರಾಟ ತೆರಿಗೆ	4373.00	3045.29
2.	ಮನರಂಜನಾ ತೆರಿಗೆ	32.00	39.44
3.	ಕೃಷಿ ವರಮಾನ ತೆರಿಗೆ	43.00	27.41
4.	ವೃತ್ತಿ ತೆರಿಗೆ	140.00	84.42
5.	ಪ್ರವೇಶ ತೆರಿಗೆ	213.00	194.23
6.	ವೈಭವ ತೆರಿಗೆ	38.00	39.35
7.	ಜೂಜು ತೆರಿಗೆ	16.00	10.27
	ಒಟ್ಟು	**4855.00**	**3440.41**

ಅಭಿವೃದ್ಧಿ ಯೋಜನೆಗಾಗಿ ನಿಗದಿಪಡಿಸಿದ ಹಣ

853 -ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು ಯೋಜನೆ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ಅಭಿವೃದ್ಧಿ ವೆಚ್ಚಕ್ಕೆ ತೆಗೆದಿಡಲಾದ ಹಣ ಎಷ್ಟು ?

ಆ) 1997-98ನೇ ಸಾಲಿಗೆ ನಿಗದಿಪಡಿಸಿದ್ದ ಯೋಜನಾ ಮೊತ್ತವೆಷ್ಟು ?

ಇ) 1998ನೇ ಮಾರ್ಚ್ 31ರ ಕೊನೆಯವರೆಗೆ ಖರ್ಚಾದ ಹಣ ಎಷ್ಟು ?